ದಿನಾಂಕ: 29-04-2022

# ಪತ್ರಿಕಾ ಪ್ರಕಟಣೆ

**ನೆಲಮಂಗಲ ಉಪವಿಭಾಗ, ನೆಲಮಂಗಲ ಗ್ರಾಮಾಂತರ ವೃತ್ತ.**

## ನೆಲಮಂಗಲ ಗ್ರಾಮಾಂತರ ಪೊಲೀಸ್ ಠಾಣೆ

**ಮಂಗಳಮುಖಿ ಕೊಲೆ ಪ್ರಕರಣದ 5 ಜನ ಆರೋಪಿಗಳ ಬಂಧನ**

**ಬೆಂಗಳೂರು ಜಿಲ್ಲೆ, ನೆಲಮಂಗಲ ಉಪ ವಿಭಾಗ, ನೆಲಮಂಗಲ ಗ್ರಾಮಾಂತರ ವೃತ್ತದ ನೆಲಮಂಗಲ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿನ ಮಹದೇವಪುರದ ಬಳಿ ಇರುವ ಕ್ಯಾಡ್ ಬರೀಸ್ ಚಾಕ್‌ಲೇಟ್ ಫ್ಯಾಕ್ಟರಿ ಬಳಿ ದಿನಾಂಕ: 08.04.2022 ರಂದು ನಡೆದ ಮಂಗಳಮುಖಿ ಅನಿಕಾ @ ಸುಮಂತ್‌ನ ಕೊಲೆ ಪ್ರಕರಣವನ್ನು ಪತ್ತೆ ಹಚ್ಚಿ 5 ಜನ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿರುತ್ತಾರೆ.**

ದಿನಾಂಕ 09.04.2022 ರಂದು ಬೆಳಿಗ್ಗೆ 10.30 ಗಂಟೆಗೆ ಮಂಗಳಮುಖಿಯಾದ ಶ್ರೀಮತಿ ಭೂಮಿಕಾ ಬಿನ್ ನಿಂಗಯ್ಯ, 20 ವರ್ಷ, ಪರಿಶಿಷ್ಟ ಜಾತಿ, ಮಹದೇವಪುರ, ಕಸಬಾ ಹೋಬಳಿ, ನೆಲಮಂಗಲ ತಾಲ್ಲೋಕ್ ರವರು ನೆಲಮಂಗಲ ಗ್ರಾಮಾಂತರ ಪೊಲೀಸ್ ಠಾಣೆಗೆ ಹಾಜರಾಗಿ ನೀಡಿದ ದೂರಿನಲ್ಲಿ ನಾನು, ಅನಿಕಾ, ಸೀಮಾ, ದಿವ್ಯ, ನಯನ, ಹಿಮರವರು ಮಹದೇವಪುರ ಕ್ಯಾಡ್ ಬರೀಶ್ ಚಾಕಲೇಟ್ ಫ್ಯಾಕ್ಟರಿಯ ಬಳಿ ಬಾಡಿಗೆ ಮನೆಯಲ್ಲಿ ವಾಸವಿದ್ದು, ದಿ: 08.04.2022 ರಂದು ರಾತ್ರಿ 11.30 ಸುಮಾರಿಗೆ ನಾವುಗಳೆಲ್ಲರೂ ರೂಮ್ ನಲ್ಲಿ ಊಟ ಮಾಡುತ್ತಿದ್ದೇವು. ಅನಿಕಾಳು ಹೊರಗಡೆ ಹೋಗಿದ್ದು, ನಂತರ ಪೋನ್ ಮಾಡಿದಾಗ ಪೋನ್ ರಿಸೀವ್ ಮಾಡಲಿಲ್ಲ. ನಾವು ಅನುಮಾನ ಬಂದು ಆಚೆ ಬಂದು ನೋಡಿದಾಗ ಚಾಕಲೇಟ್ ಫ್ಯಾಕ್ಟರಿ ಹತ್ತಿರ ಇರುವ ಮರಗಳ ಬಳಿ ಅನಿಕಾಳು ರಸ್ತೆ ಪಕ್ಕ ಪ್ರಜ್ಞೆ ತಪ್ಪಿ ನೆಲದ ಮೇಲೆ ಬಿದಿದ್ದಳು. ತಲೆಯಿಂದ ರಕ್ತ ಬರುತ್ತಿತ್ತು. ಯಾರೋ ದುಷ್ಕರ್ಮಿಗಳು ಯಾವುದೋ ಕಾರಣಕ್ಕೆ ಅನಿಕಾಳಿಗೆ ಕೊಲೆ ಮಾಡುವ ಉದ್ದೇಶದಿಂದ ಯಾವುದೋ ಆಯುಧದಿಂದ ತಲೆಗೆ ಹೊಡೆದಿದ್ದು, ಬೆಂಗಳೂರು ಸಪ್ತಗಿರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಅನಿಕಾ ದಿ: 09.04.2022 ರಂದು ಮೃತಪಟ್ಟಿದ್ದು, ಈ ಬಗ್ಗೆ ನೆಲಮಂಗಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮೊ.ನಂ: 66/22 ಕಲಂ: 302 ಐ.ಪಿ.ಸಿ. ರೀತ್ಯ ಪ್ರಕರಣ ದಾಖಲಾಗಿರುವುದು ಸರಿಯಷ್ಟೆ.

ಸದರಿ ಪ್ರಕರಣದ ಆರೋಪಿಗಳ ಪತ್ತೆಯ ಸಲುವಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ಅಧೀಕ್ಷಕರವರಾದ ಡಾ. ಕೋನ ವಂಸಿಕೃಷ್ಣ ಐ.ಪಿ.ಎಸ್ ಮತ್ತು ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಶ್ರೀ, ಕೆ ಲಕ್ಷ್ಮೀಗಣೇಶ್ ಕೆ.ಎಸ್.ಪಿ.ಎಸ್ ಹಾಗೂ ನೆಲಮಂಗಲ ಉಪ ವಿಭಾಗದ ಪೊಲೀಸ್ ಉಪಾಧೀಕ್ಷಕರಾದ ಶ್ರೀ, ಕೆ.ಸಿ. ಗೌತಮ್ ಕೆ.ಎಸ್.ಪಿ.ಎಸ್. ರವರ ಮಾರ್ಗದರ್ಶನದಲ್ಲಿ ನೆಲಮಂಗಲ ಗ್ರಾಮಾಂತರ ವೃತ್ತದ ಸರ್ಕಲ್ ಇನ್ಸ್‌ಪೆಕ್ಟರ್ ರವರಾದ ಶ್ರೀ ಎ. ರಾಜೀವ್ ರವರ ನೇತೃತ್ವದಲ್ಲಿ ನೆಲಮಂಗಲ ಗ್ರಾಮಾಂತರ ಪೊಲೀಸ್ ಠಾಣೆಯ ಪಿ.ಎಸ್.ಐ ಶ್ರೀಮತಿ ಈರಮ್ಮ , ಡಾಬಸ್ ಪೇಟೆ ಪೊಲೀಸ್ ಠಾಣೆಯ ಪಿ.ಎಸ್.ಐ. ಶ್ರೀ ಎಂ.ಎನ್. ಮುರುಳಿ ಮತ್ತು ಸಿಬ್ಬಂದಿಗಳಾದ ಹೆಚ್.ಸಿ 323 ಬಾಲಾಜಿಸಿಂಗ್, ಹೆಚ್.ಸಿ. 798 ಗಂಗಾಧರ್, ಪಿ.ಸಿ. 967 ಶಿವಶಂಕರ್, ಪಿ.ಸಿ. 956 ಪೈರೋಜ್, ಪಿ.ಸಿ. 845 ರಂಗನಾಥ, ಪಿ.ಸಿ. 994 ರಘು, ಪಿ.ಸಿ. 1262 ಇಮ್ರಾನ್ ಖಾನ್, ಪಿ.ಸಿ. 862 ಮಧು ಕುಮಾರ್, ಪಿ.ಸಿ. 1572 ಸುನಿಲ್ ಕುಮಾರ್ ಹಾಗೂ ಜೀಪ್ ಚಾಲಕರಾದ ಎ.ಹೆಚ್.ಸಿ. 29 ಕೆ. ರವಿಕುಮಾರ್ , ಮತ್ತು ಎ.ಪಿ.ಸಿ 172 ಲಚ್ಚಪ್ಪ ಹಾಗೂ ಬೆಂಗಳೂರು ಜಿಲ್ಲಾ ಕಛೇರಿಯ ತಾಂತ್ರಿಕ ವಿಭಾಗದ ಉಮೇಶ್ ಹಾಗೂ ತನಿಖಾ ಸಹಾಯಕರಾದ ಹೆಚ್.ಸಿ. 398 ಶಿವಕುಮಾರ್ ರವರ ತಂಡವು ಖಚಿತ ಬಾತ್ಮೀ ಮೇರೆಗೆ ದಿ: 29.04.2022 ರಂದು ಕೃತ್ಯಕ್ಕೆ ಸಂಬಂಧಪಟ್ಟಂತೆ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿರುತ್ತಾರೆ.

| ಕ್ರ.ಸಂ | ಆರೋಪಿ ಹೆಸರು | ಈತನ ವಿರುದ್ದ ದಾಖಲಾಗಿರುವ ಪ್ರಕರಣಗಳು | ಆರೋಪಿಯ ಭಾವಚಿತ್ರ |
|---|---|---|---|
| 1. | ನವೀನ್ ಬಿನ್ ರಾಜು ಶೆಟ್ಟಿ, 22 ವರ್ಷ, ಗಾಣಿಗರು, ಆಟೋ ಡ್ರೈವರ್ ಕೆಲಸ, ಬೋವಿಪಾಳ್ಯ, 5ನೇ ಕ್ರಾಸ್, ನಂ: 81, ದೊಡ್ಡಮ್ಮ ದೇವಸ್ಥಾನದ ಹತ್ತಿರ, ಕೆಂಪಮ್ಮನವರ ಮನೆಯಲ್ಲಿ ವಾಸ, ಮಹಾಲಕ್ಷ್ಮೀ ಲೇಔಟ್, ಬೆಂ.56. | |  |
| 2. | ಸಂತೋಷ್ ಬಿನ್ ಮೂರ್ತಿ, 20 ವರ್ಷ, ಬೋವಿ ಜನಾಂಗ, ಮಹದೇವಪುರದಲ್ಲಿ ಬಂಡೆ ಹೊಡೆಯುವ ಕೆಲಸ, ವಾಸ: ನಂದಗೋಕುಲನಗರ, ಮಹದೇವಪುರದ ಬಳಿ, ಸ್ವಂತ: ಗೆನೇಶ್ವರ, ಅನೂರು ತಾಲ್ಲೋಕ್, ಚಾಮರಾಜನಗರ ಜಿಲ್ಲೆ, | |  |
| 3. | ಮಹೇಶ್ ಬಿನ್ ಮಹದೇವಪ್ಪ, 20 ವರ್ಷ, ಪರಿಶಿಷ್ಟ ಜಾತಿ, ವಾಸ: ಷೇರ್ ಮಾರುಕಟ್ಟೆ ಕೆಲಸ, ವಾಸ: ಗಂಗಮ್ಮನ ಮನೆಯಲ್ಲಿ ಬಾಡಿಗೆ, ಗಂಗಾಧರೇಶ್ವರ್ ಸ್ಕೂಲ್ ಹತ್ತಿರ, 1ನೇ ಕ್ರಾಸ್, 3ನೇ ಮೈನ್, ಕಸ್ತೂರಿ ಬಡಾವಣೆ, ಕಮಲಾನಗರ, ಬೆಂ.79. | |  |
| 4. | ಮಣಿಕಂಠ @ ಮಣಿ ಬಿನ್ ಬಾಬು, 21 ವರ್ಷ, ಎಸ್.ಟಿ. ಜನಾಂಗ, ತರಕಾರಿ ವ್ಯಾಪಾರ, ಹೇರೋಹಳ್ಳಿ ಕ್ರಾಸ್, ಸರ್ಕಾರಿ ಪ್ರಾಥಮಿಕ ಪಾಠಶಾಲೆಯ ಹತ್ತಿರ, ಸ್ವಂತ ಊರು: ತಿರುವಣಮಲೈ, ಚೆಂಜಿಕೋಟೆ, | |  |
| 5. | ಕುಮಾರ್ ಬಿನ್ ಮೂರ್ತಿ, ( ಕಾನೂನು ಸಂಘರ್ಷಕ್ಕೊಳಗಾದ ಬಾಲಕ) | | |

**(ಡಾ. ಕೋನ ವಂಸಿಕೃಷ್ಣ ಐಪಿಎಸ್)**
**ಪೊಲೀಸ್ ಅಧೀಕ್ಷಕರು**
**ಬೆಂಗಳೂರು ಗ್ರಾಮಾಂತರ ಜಿಲ್ಲೆ**